**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿ, ಶ್ರೀ ಬಿ.ಕೆ. ಹರಿಪ್ರಸಾದ್ ಮತ್ತು ಶ್ರೀ ಯು.ಬಿ. ವೆಂಕಟೇಶ್ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ:**

ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಆದ ಭಾರಿ ಮಳೆಯಿಂದಾಗಿ ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರದ ಹೊರಮಾವು, ವಡ್ಡರಪಾಳ್ಯ, ಸಾಯಿ ಬಡಾವಣೆ, ಚೇಲಿಕೆರೆ, ಅನುಗ್ರಹ ಲೇಔಟ್, ಗೆದ್ದಲಹಳ್ಳಿ ಗ್ರಾಮಗಳ ಬಡಾವಣೆಗಳ ಮಧ್ಯದಲ್ಲಿ ರಾಜಕಾಲುವೆ ಹಾದು ಹೋಗುತ್ತಿದ್ದು, ಈ ರಾಜಕಾಲುವೆಯು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿರುವುದರಿಂದ, ಸುತ್ತಮುತ್ತಲಿನ ಪ್ರದೇಶಗಳಿಗೆ ಅಪಾರ ನೀರು ಹರಿದ ಪರಿಣಾಮವಾಗಿ ಈ ಗ್ರಾಮಗಳು ಜಲಾವೃತದಿಂದ ತತ್ತರಿಸಿ ಹೋಗಿದ್ದು, ಮನೆ ಮನೆಯಲ್ಲಿರುವ ಗೃಹೋಪಯೋಗಿ ವಸ್ತುಗಳು ಕಳೆದುಕೊಂಡ ಜನರು ಬೀದಿ ಪಾಲಾಗಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಅಂದರೆ ದಿನಾಂಕ: 08.09.2020ರ ರಾತ್ರಿ ಹೆಬ್ಬಾಳ ಕಣಿವೆ ಒಂದೇ ಪ್ರದೇಶದಲ್ಲಿ ವಾರ್ಷಿಕ ಮಳೆ ಸರಾಸರಿಯನ್ನು ಮೀರಿ, ಮೋಡದ ಬಿರುಕಿನಿಂದಾಗಿ (Cloud Burst) ಸುಮಾರು 135 ಮಿ.ಮೀ ನಷ್ಟು ಭಾರಿ ಮಳೆಯಾಗಿರುತ್ತದೆ.

ಬೆಂಗಳೂರು ನಗರದ ರಾಜಕಾಲುವೆಗಳು ಸುಮಾರು 60 ಮಿ.ಮೀ ನಿಂದ 70 ಮಿ.ಮೀಟರ್‌ವರೆಗೂ ಮಳೆ ನೀರಿನ ಹರಿವನ್ನು ಸಾಗಿಸುವ ಸಾಮರ್ಥ್ಯ ಹೊಂದಿದ್ದು, ದಿನಾಂಕ: 08.09.2020 ರಂದು ಹೆಬ್ಬಾಳ ಕಣಿವೆಯಲ್ಲಿ ಕನಿಷ್ಠ 80 ಮಿ.ಮೀ ನಿಂದ 135 ಮಿ.ಮೀ ವರೆಗೂ ಮಳೆಯಾಗಿದ್ದು, ಸದರಿ ಮಳೆ ಪ್ರಮಾಣವು ಕೆಳಕಂಡಂತೆ ಇರುತ್ತದೆ.

| BBMP Zone | Ward Name | Ward No. | Location | Rain |
|---|---|---|---|---|
| East | Kushal Nagar | 31 | Kushalnagar (East Zone) | 136 |
| Dasarahalli | Chokkasandra | 39 | Chokkasandra (Dasarahalli Zone) | 132 |
| RR Nagar | J P Park | 17 | YASHAVANTHAPUR | 129.5 |
| Mahadevapura | Devasandra | 55 | BENGALURU EAST(KRISHNARAJAPUR) | 128.5 |
| Yelahanka | Byatarayanapura | 7 | Byatarayanapura (Yelahanka Zone) | 125.5 |
| East | Vishwanath Nagenahalli | 22 | Vishwanath Nagenahalli (East Zone) | 125 |
| Dasarahalli | Bagalakunte | 14 | Bagalakunte (Dasarahalli Zone) | 117.5 |
| Mahadevapura | Rammurthynagar | 26 | Ramamurthynagar (Mahadevapura Zone) | 116.5 |
| West | Nagapura | 67 | Nagapura (West Zone) | 115.5 |
| Yelahanka | Dodda Bommasandra | 10 | Doddabommasandra (Yelahanka Zone) | 114.5 |

. . .2/-

| | | | | |
|---|---|---|---|---|
| Dasarahalli | Peenya Industrial Area | 41 | Peenya Indl.Area (Dasarahalli Zone) | 109.5 |
| Mahadevapura | Horamavu | 25 | Horamavu (2) (Mahadevapura Zone) | 108.5 |
| West | Nandini Layout | 43 | Nandini layout (West Zone) | 102.5 |
| Mahadevapura | Horamavu | 25 | Horamavu (1) (Mahadevapura Zone) | 101.5 |
| Mahadevapura | Kadugodi | 83 | Kadugodi (Mahadevapura Zone) | 100.5 |
| Yelahanka | Jakkuru | 5 | Jakkur (1) (Yelahanka Zone) | 100 |
| Mahadevapura | Hoodi | 54 | Hoodi (Mahadevapura Zone) | 96 |
| East | Banasavadi | 27 | Banasavadi (East Zone) | 89.5 |
| East | Pulakeshinagar | 78 | Pulakeshinagar (East Zone) | 87 |
| Dasarahalli | Hegganahalli | 71 | Hegganahalli (Dasarahalli Zone) | 86.5 |
| RR Nagar | Kottegepalya | 73 | Kottegepalya (RRNagar Zone) | 85.5 |
| Yelahanka | Vidyaranyapura | 9 | Vidyaranyapura (Yelahanka Zone) | 81.5 |
| West | Marappanapalya | 44 | Marappanapalya (West Zone) | 80 |
| Yelahanka | Vidyaranyapura | 9 | Yelahanka-KSNDMC (Yelahanka Zone) | 80 |
| West | Rajamahal Guttahalli | 64 | Rajmahal Guttahalli (West Zone) | 76.5 |
| Yelahanka | Kempegowda | 1 | Yelahanka | 70.5 |

ಹೆಬ್ಬಾಳ ಕಣಿವೆಯ ಜಲವೃತವಾದ ಪ್ರದೇಶವಾದ ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ಹೊರಮಾವು, ವಡ್ಡರಪಾಳ್ಯ, ಸಾಯಿ ಬಡಾವಣೆ, ಚೇಳಕೆರೆ, ಅನುಗ್ರಹ ಲೇಔಟ್ ಮತ್ತು ಗೆದ್ದಲಹಳ್ಳಿ ಗ್ರಾಮಗಳ ಬಡಾವಣೆಗಳ ಮಧ್ಯಭಾಗದಲ್ಲಿ ರಾಜಕಾಲುವೆಯು ಇದ್ದು, ಸದರಿ ರಾಜಕಾಲುವೆಯ ಅಗಲವು ಸುಮಾರು 45.00 ಮೀಟರ್‌ಗಳಿರುತ್ತದೆ. ಆದರೆ, ಸದರಿ ರಾಜಕಾಲುವೆಯ ಅಡ್ಡವಾಗಿ ರೈಲ್ವೆ ಹಳಿಯ ಏರಿ ಪ್ರದೇಶವಿದ್ದು, (Railway line Bund Portion) ಸದರಿ ರೈಲ್ವೆ ಹಳಿಯ ಏರಿ ಪ್ರದೇಶದಲ್ಲಿ 4.70 X 2.60 ಮೀಟರ್ ಅಗಲದ ಎರಡು ಕಿಂಡಿಗಳು (Vent) ಇದ್ದು, ಈ ಒಂದು ನಿರ್ಧಿಷ್ಟ ಜಾಗದಲ್ಲಿ ನೀರಿನ ಹರಿಯುವಿಕೆ ಜಾಗದ ಕೊರತೆಯಾಗಿ ಮಳೆ ನೀರಿನ ಹೊರಹರಿವು ಸಂಕುಚಿತಗೊಂಡಿರುತ್ತದೆ.

ಸುಮಾರು 135 ಮಿ.ಮೀಟರ್ ಭಾರಿ ಮಳೆ ಮತ್ತು ರೈಲ್ವೆ ಏರಿ ಪ್ರದೇಶದಲ್ಲಿ ಮಳೆ ನೀರು ಹೊರಹರಿವು ಸಂಕುಚಿತಗೊಂಡಿರುವುದರಿಂದ ಮಳೆ ನೀರು ಸರಾಗವಾಗಿ ಹರಿದು ಹೋಗದೆ ರಾಜಕಾಲುವೆಯ ಅಕ್ಕಪಕ್ಕದ ಪ್ರದೇಶಗಳಿಗೆ ಮಳೆ ನೀರು ನುಗ್ಗಿರುತ್ತದೆ.

ರೈಲ್ವೆ ಇಲಾಖೆಗೆ ಈ ಹಿಂದೆ, ಅಂದರೆ ದಿನಾಂಕ: 18.09.2019 ರಂದು ಸದರಿ ಎರಡು ಕಿಂಡಿಗಳನ್ನು (Vents) ಅಗಲಗೊಳಿಸಲು ಅಥವಾ ಮತ್ತೆ ಎರಡು ಸೇತುವೆಗಳನ್ನು ಹೆಚ್ಚುವರಿಯಾಗಿ ನಿರ್ಮಿಸಲು ಬೃಹತ್

. . .3/-

ಬೆಂಗಳೂರು ಮಹಾನಗರ ಪಾಲಿಕೆಯಿಂದ ಮನವಿ ಮಾಡಿದ್ದು, ಆದರೆ ರೈಲ್ವೆ ಇಲಾಖೆಯಿಂದ ಸಕರಾತ್ಮಕ ಸ್ಪಂದನೆ ದೊರೆತಿರುವುದಿಲ್ಲ.

ತದನಂತರದಲ್ಲಿ, ದಿನಾಂಕ: 15-09-2020 ರಂದು, ಸದರಿ ಮಳೆಯಿಂದ ಆದ ಅನಾಹುತವನ್ನು ಖುದ್ದಾಗಿ ಪರಿಶೀಲಿಸಿದ ರೈಲ್ವೆ ಇಲಾಖೆಯ ಅಧಿಕಾರಿಗಳು 6.00ಮೀ x 5.00 ಮೀಟರ್‌ನ ಹೆಚ್ಚುವರಿ ಎರಡು ಕಿಂಡಿಗಳನ್ನು ನಿರ್ಮಿಸಲು ಒಪ್ಪಿಗೆ ಸೂಚಿಸಿದ್ದು, ಸದರಿ ಕಾಮಗಾರಿಗೆ ತಗಲುವ ವೆಚ್ಚವನ್ನು ಬಿಬಿಎಂಪಿ ವತಿಯಿಂದ ಭರಿಸಬೇಕೆಂದು ತಿಳಿಸಿ, ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ, ಬಿಬಿಎಂಪಿಗೆ ಹಣ ಠೇವಣಿ ನೀಡುವಂತೆ ಕೋರಿರುತ್ತಾರೆ. ಸದರಿ ಮೊತ್ತವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ 2020-21ನೇ ಸಾಲಿನಲ್ಲಿ ರೂ.8.00 ಕೋಟಿಗಳನ್ನು ಮತ್ತು 2021-22ನೇ ಸಾಲಿನಲ್ಲಿ ರೂ.10.00 ಕೋಟಿಗಳನ್ನು ಭರಿಸಲು ಉದ್ದೇಶಿಸಲಾಗಿದ್ದು, ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸದರಿ ಹೆಚ್ಚುವರಿ ಸೇತುವೆ ನಿರ್ಮಾಣದಿಂದ ಮುಂದಿನ ದಿನಗಳಲ್ಲಿ ಹೆಬ್ಬಾಳ ಕಣಿವೆಯ ಜಲವೃತವಾದ ಪ್ರದೇಶವಾದ ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ಹೊರಮಾವು, ವಡ್ಡರಪಾಳ್ಯ, ಸಾಯಿ ಬಡಾವಣೆ, ಚೇಳಕೆರೆ, ಅನುಗ್ರಹ ಲೇಔಟ್ ಮತ್ತು ಗೆದ್ದಲಹಳ್ಳಿ ಗ್ರಾಮಗಳ ಬಡಾವಣೆಗಳಲ್ಲಿ ಮಳೆ ಸಂಬಂಧಿತ ಪ್ರವಾಹವನ್ನು ತಪ್ಪಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ದಿನಾಂಕ: 08.09.2020 ರಂದು ಆದ ಮಳೆಯಿಂದ ತೊಂದರೆಗೀಡಾದ ಸಾರ್ವಜನಿಕರಿಗೆ ಆಹಾರ ಪ್ಯಾಕೇಟ್‌ಗಳನ್ನು ನೀಡಲಾಗಿದ್ದು, ಸುಮಾರು 136 ಮನೆಗಳಿಗೆ ರೂ.13.60 ಲಕ್ಷಗಳ ನಷ್ಟ ಉಂಟಾಗಿರುವುದಾಗಿ ಅಂದಾಜಿಸಲಾಗಿದ್ದು, ಶೀಘ್ರದಲ್ಲಿ ಪರಿಹಾರ ಮೊತ್ತವನ್ನು ನಷ್ಟಕ್ಕೆ ಒಳಗಾದ ಕುಟುಂಬಗಳಿಗೆ ವಿತರಿಸಲು ಬಿಬಿಎಂಪಿ ವತಿಯಿಂದ ಕ್ರಮಕೈಗೊಳ್ಳಲಾಗುತ್ತದೆ.

ಸಂಖ್ಯೆ: ನಅಇ 201 ಎಂಎನ್‌ವೈ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ